ದಿನಾಂಕಃ 08-11-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ವಾದಿ ಪರ ಶ್ರೀ ಎಸ್ ಬಿ ಪಿ ವಕೀಲರಿಂದಃ**

ನಾನು ಈ ದಾವೆಯ 1 ನೇ ವಾದಿ ಎಂದರೆ ಸರಿ. 2 ನೇ ವಾದಿ ನನ್ನ ಅಕ್ಕ. ನಾನು ಪಿಯುಸಿ ವರೆಗೂ ವಿದ್ಯಾಭ್ಯಾಸ ಮಾಡಿರುತ್ತೇನೆ. ಈ ದಾವೆಯನ್ನು ನಾವು ಈ ದಾವೆಯನ್ನು ಮಂಜುನಾಥ 1 ರಿಂದ 6ನೇ ಪ್ರತಿವಾದಿಗಳ ವಿರುದ್ದ ಹೂಡಿರುತ್ತೇನೆ. ನಾನು ಈ ದಾವೆಯನ್ನು ಪಾಲುವಿಭಾಗ ಕೋರಿ ಹೂಡಿರುತ್ತೇವೆ. ಈ ದಾವೆ ಹೂಡಲು ಮಾಹಿತಿಯನ್ನು ನಾವೇ ಕೊಟ್ಟಿರುತ್ತೇನೆ, ಹಾಗಾಗಿ ನನಗೆ ದಾವೆಯ ಸಂಪೂರ್ಣ ವಿವರ ತಿಳಿದಿದೆ. ಅದರಂತೆ ಈ ದಾವೆಗೆ ಪ್ರತಿವಾದಿಗಳು ಸಲ್ಲಿಸಿರುವ ತಕರಾರು ಮತ್ತು ದಾಖಲೆಗಳ ಕುರಿತು ತಿಳಿದುಕೊಂಡಿರುತ್ತೇನೆ. ನಾನು ಹಾಲಿ ಬೆಳನಳ್ಳಿ ಗ್ರಾಮದಲ್ಲಿ ವಾಸವಾಗಿದ್ದೆನೆ. 1, 2 ಮತ್ತು 5ನೇ ಪ್ರತಿವಾದಿಗಳು ನನ್ನ ಅತ್ತೆಯಂದಿರು. 3 ನೇ ಪ್ರತಿವಾದಿ ನನ್ನ ದೊಡ್ಡಪ್ಪ. 4ನೇ ಪ್ರತಿವಾದಿ 3 ನೇ ಪ್ರತಿವಾದಿಯ ಮಗ ಎಂದರೆ ಸರಿ. ಸದರಿ 4ನೇ ಪ್ರತಿವಾದಿ ಬೆಂಗಳೂರಿನ ಡಿ ಹೆಚ್ ಎಲ್ ಲಾಜಿಸ್ಟಿಕ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದಾನೆ ಎಂದರೆ ಸರಿ. ಅತ ಇನ್ನೂ ಅವಿವಾಹಿತ. ಆತನಿಗೆ ತಿಂಗಳಿಗೆ 60 ಸಾವಿರ ಸಂಬಳ ಬರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಶಿವಕುಮಾರ ಎನ್ನುವವರು ನನ್ನ ತಂದೆ. ನನ್ನ ತಂದೆಗೆ ಇಬ್ಬರು ಹೆಂಡತಿಯರು ಎಂದರೆ ನನಗೆ ಗೊತ್ತಿಲ್ಲ. ವಿನೋದ ಎನ್ನುವವರು ನನ್ನ ತಾಯಿ. ಸದರಿಯವರು ಮೃತಪಟ್ಟಿರುತ್ತಾರೆ. ಈ ದಾವೆಯ 6ನೇ ಪ್ರತಿವಾದಿಯ ಕುರಿತು ನನಗೆ ಯಾವುದೇ ಮಾಹಿತಿ ಇಲ್ಲ. ಹಾಗಾಗಿ 6 ನೇ ಪ್ರತಿವಾದಿಯನ್ನು ನಮ್ಮ ವಕೀಲರು ಅವರ ಸ್ವಇಚ್ಚೆಯ ಮೇರೆಗೆ ಈ ದಾವೆಯಲ್ಲಿ ಸೇರಿಸಿರುವರೇ ಎಂದರೆ ಸಾಕ್ಷಿ 3ನೇ ಪ್ರತಿವಾದಿ ಮಾಡಿಸಿದ ವಂಶವೃಕ್ಷದಲ್ಲಿ ಮತ್ತು ದಾವಾಸ್ತಿಯ ಪಹಣಿಯಲ್ಲಿ 6ನೇ ಪ್ರತಿವಾದಿಯ ಹೆಸರಿದ್ದು ಹಾಗಾಗಿ ಆಕೆಯನ್ನು ಸಹ ಪಕ್ಷಗಾರರಾಗಿ ಮಾಡಿರುತ್ತೇವೆ. ಸದರಿ 6ನೇ ಪ್ರತಿವಾದಿಯ ಹೆಸರು ಯಾವ ಆಸ್ತಿಗಳಿಗೆ ಸಂಬಂಧಪಟ್ಟಂತೆ ನಮೂದಾಗಿತ್ತು ಎಂದು ನನಗೆ ಗೊತ್ತಿಲ್ಲ. ಈ ದಾವೆಯಲ್ಲಿ ನಮೂದಿಸಿರುವ 11 ದಾವಾಸ್ತಿಗಳ ಕುರಿತು ನನಗೆ ಮಾಹಿತಿ ಇದೆ.

6 ನೇ ದಾವಾಸ್ತಿಯನ್ನು 4 ನೇ ಪ್ರತಿವಾದಿ ಸ್ವಯಾರ್ಜಿತವಾಗಿ ಖರೀದಿಸಿದ ಆಸ್ತಿ ಎಂದರೆ ಸರಿಯಲ್ಲ. ಸದರಿ ಆಸ್ತಿ ನಮ್ಮ ಕುಟುಂಬಕ್ಕೆ ಹೇಗೆ ಬಂತು ಎಂಬ ಬಗ್ಗೆ ನನಗೆ ಗೊತ್ತಿಲ್ಲ. 9 ನೇ ದಾವಾಸ್ತಿಯನ್ನು ಲತಾ ಕೋಂ ಮಂಜುನಾಥ ಎನ್ನುವವರು ಕ್ರಯಕ್ಕೆ ಖರೀದಿಸಿದ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ಸದರಿ ಆಸ್ತಿಯ ಖಾತೆ ಸದರಿ ಲತಾ ಎನ್ನುವವರ ಹೆಸರಿನಲ್ಲಿದೆ ಎಂದರೆ

ಸರಿ. ಸದರಿ ಲತಾರವರನ್ನು ಈ ದಾವೆಯಲ್ಲಿ ಪಕ್ಷಗಾರರಾಗಿ ಸೇರಿಸಿಲ್ಲ ಎಂದರೆ ಸರಿ. ಸದರಿ ಲತಾರವರ ತವರುಮನೆ ಹೊಸದುರ್ಗ ತಾಲ್ಲೂಕಿನ ಜಂತಿನಹೊಳಲು ಗ್ರಾಮ ಎಂದರೆ ಸರಿ. ಸದರಿ ಲತಾರವರ ಹೆಸರಿಗೆ ಸದರಿ ಗ್ರಾಮದಲ್ಲಿ ಸರ್ವೆ ನಂ 6-1 ರಲ್ಲಿ 3 ಎಕರೆ 11 ಗುಂಟೆ ಆಸ್ತಿ ಇದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಜಮೀನನ್ನು ಲತಾ ರವರು ಕೆ ಮಲ್ಲಪ್ಪ ಬಿನ್ ಕರಿಯಪ್ಪ ಎನ್ನುವವರಿಗೆ ಮಾರಾಟ ಮಾಡಿ ಬಂದ ಹಣದಿಂದ 9ನೇ ದಾವಾಸ್ತಿಯನ್ನು ಖರೀದಿಸಿರುತ್ತಾರೆ ಎಂದರೆ ಸರಿಯಲ್ಲ. 9 ನೇ ದಾವಾಸ್ತಿಯ ದಾಖಲೆಯನ್ನು ಮತ್ತು ಕ್ರಯಪತ್ರವನ್ನು ನಾನು ನೋಡಿಲ್ಲ. ಸದರಿ ಲತಾರವರು 9 ನೇ ದಾವಾಸ್ತಿಯನ್ನು ಚಂದ್ರಮ್ಮ ಕೋಂ ಚನ್ನಬಸಪ್ಪರವರಿಂದ ಖರೀದಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ನನ್ನ ಅಜ್ಜನ ಹೆಸರು ತಮ್ಮಯ್ಯ ಎಂದರೆ ಸರಿ. ನನ್ನ ಅಜ್ಜನಿಗೆ ಪ್ರತಿವಾದಿಗಳಾದ 1,2, 3,5 ಮತ್ತು ನನ್ನ ತಂದೆಯಾದ ಶಿವಕುಮಾರ್ ರವರು ಮಕ್ಕಳು ಎಂದರೆ ಸರಿ. 6 ನೇಪ್ರತಿವಾದಿಗೆ ಎಷ್ಟುಜನ ಮಕ್ಕಳು ಎಂದು ನನಗೆ ಗೊತ್ತಿಲ್ಲ. ಸದರಿಯವರ ಮಕ್ಕಳನ್ನು ನಾನು ಈ ದಾವೆಯಲ್ಲಿ ಪಕ್ಷಗಾರಾಗಿ ಮಾಡಿಲ್ಲ ಎಂದರೆ ನನಗೆ ಗೊತ್ತಿಲ್ಲ.

ನನ್ನ ಅಜ್ಜನಿಗೆ ಶಾರದಮ್ಮ ಎಂಬ ತಂಗಿಯೂ ಇದ್ದರು ಎಂದರೆ ಸರಿ. ನನ್ನ ಅಜ್ಜ ತಮ್ಮಯ್ಯ ಮತ್ತು ಶಾರದಮ್ಮರವರು ವೀರಶೆಟ್ಟಪ್ಪನವರ ಮಕ್ಕಳು ಎಂದರೆ ಸರಿ. ಸದರಿ ವೀರಶೆಟ್ಟಪ್ಪನವರ ತಂದೆ ಚೆನ್ನವೀರಪ್ಪನವರಿಗೆ ಮಹದೇವಮ್ಮ ಮತ್ತು ಚೆನ್ನಮ್ಮ ಎಂಬ ಇಬ್ಬರು ಹೆಂಡತಿಯರುಇದ್ದರು ಎಂದರೆ ಸರಿ. ಸದರಿ ವೀರಶೆಟ್ಟಪ್ಪನವರು ಚೆನ್ನವೀರಪ್ಪ ಮತ್ತು ಮಹದೇವಮ್ಮನವರ ಮಗ ಎಂದರೆ ಸರಿ. ಚೆನ್ನವೀರಪ್ಪನವರ ಎರಡನೇ ಹೆಂಡತಿ ಚೆನ್ನಮ್ಮನವರಿಗೆ ರುದ್ರಪ್ಪ ಮತ್ತು ಚೆನ್ನಪ್ಪ ಎಂಬ ಇಬ್ಬರು ಮಕ್ಕಳು ಇದ್ದರು ಎಂದರೆ ಸರಿ. ರುದ್ರಪ್ಪ ಆತನ ಹೆಂಡತಿ ರುದ್ರಮ್ಮನವರಿಗೆ ಚೆನ್ನವೀರಪ್ಪ ಮತ್ತು ಮಹೇಶ ಎನ್ನುವವರು ಇಬ್ಬರು ಮಕ್ಕಳು ಎಂದರೆ ನನಗೆ ಗೊತ್ತಿಲ್ಲ. ಸದರಿ ಚೆನ್ನವೀರಪ್ಪನವ 2 ನೇ ಮಗನಾದ ಚೆನ್ನಪ್ಪ ಮತ್ತು ಸಾವಿತ್ರಮ್ಮ ದಂಪತಿಗಳಿಗೆ ಕಾಂತರಾಜು, ಚಂದ್ರಮ್ಮ, ಚಂದ್ರಶೇಖರ ಮತ್ತು ಧನಂಜಯ ಎಂಬ 4 ಜನ ಮಕ್ಕಳು ಎಂದರೆ ನನಗೆ ಗೊತ್ತಿಲ್ಲ. ಸದರಿ ಧನಂಜಯರವರು ಶಿಕ್ಷಕರಾಗಿ ಕೆಲಸ ನಿರ್ವಹಿಸುತ್ತಿದ್ದು ಹೊದಿಗೆರೆ ಗ್ರಾಮದಲ್ಲ ಮದುವೆಯಾಗಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ಸದರಿ ನಮ್ಮ ಕುಟುಂಬದ ಮೂಲ ಪುರುಷನಾದ ಚೆನ್ನವೀರಪ್ಪನವರ 3 ಜನ ಗಂಡುಮಕ್ಕಳಾದ ವೀರಶೆಟ್ಟಪ್ಪ , ರುದ್ರಪ್ಪ , ಚೆನ್ನಪ್ಪರವರು ತಮ್ಮ ಕುಟುಂಬದ ದಾವಾಸ್ತಿಗಳಾದ 1 ರಿಂದ 5 ನೇ ದಾವಾಸ್ತಿಗಳನ್ನು ಮತ್ತು 7 , 8 ಮತ್ತು 10 ನೇ ದಾವಾಸ್ತಿಗಳನ್ನು ಜುಬಾನಿ ಹಿಸ್ಸೆ ಮಾಡಿಕೊಂಡು ತಲಾ 1/3 ನೇ ಭಾಗದಂತೆ ಅನುಭವದಲ್ಲಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ 3 ಜನರ ನಡುವೆ ಇದುವರೆಗೂ ಯಾವುದೇ ನೊಂದಾಯಿತ ಪಾಲುವಿಭಾಗಪತ್ರವಾಗಿಲ್ಲ ಎಂದರೆ ನನಗೆಗೊತ್ತಿಲ್ಲ. ದಾವಾಸ್ತಿಗಳಾದ 1 ರಿಂದ 5 ನೇ ದಾವಾಸ್ತಿಗಳನ್ನು ಮತ್ತು 7 , 8 ಮತ್ತು 10 ನೇ ದಾವಾಸ್ತಿಗಳ ಪಹಣಿ ದಾಖಲೆಗಳು ವಾದಿ ಮತ್ತು ಪ್ರತಿವಾದಿಗಳ ಜಂಟೀ ಹೆಸರಿನಲ್ಲಿದೆ ಎಂದರೆ ಸರಿ. ಸದರಿ ಆಸ್ತಿಗಳಲ್ಲಿ ಚೆನ್ನವೀರಪ್ಪನವರ 3 ಜನ ಗಂಡುಮಕ್ಕಳಾದ ವೀರಶೆಟ್ಟಪ್ಪ , ರುದ್ರಪ್ಪ , ಚೆನ್ನಪ್ಪರವರು ತಲಾ 1/3 ನೇ ಭಾಗದಂತೆ ಹಂಚಿಕೆ ಮಾಡಿಕೊಂಡು ಅನುಭವದಲ್ಲಿದ್ದು ಇದುವರೆಗೂ ಯಾವುದೇ ನೊಂದಾಯಿತ ಪಾಲುವಿಭಾಗಪತ್ರ ಮಾಡಿಕೊಂಡಿಲ್ಲ ಎಂದರೆ ಸರಿ. ನಾನು ಸದರಿಯವನ್ನು ಈ ದಾವೆಯಲ್ಲಿ ಪಕ್ಷಗಾರರಾಗಿ ಸೇರಿಸಿಲ್ಲ ಎಂದರೆ ಒಟ್ಟು ಕುಟುಂಬದಿದ ಬಂದ ಕೆಲವು ದಾವಾಸ್ತಿಗಳುನಮ್ಮ ಹೆರಿನಲ್ಲಿದೆ ಎಂದರೆ ಸರಿಯಲ್ಲ. ನಾನು ನಮ್ಮ ಹೆಸರಿನಲ್ಲಿರುವ ಸದರಿ ಒಟ್ಟು ಕುಟುಂಬದ ಆಸ್ತಿಗಳನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸಾಕ್ಷಿ ನಾವು ಯಾವುದರಲೂಲ ಅನುಭವದಲ್ಲಿ ಇಲ್ಲ ಎಂದು ನುಡಿಯುತ್ತಾರೆ. ಹಾಗಾಗಿ ನಾನು ಯಾವುದೇ ದಾವಾಸ್ತಿಗಳಲ್ಲಿ ಅನುಭವದಲ್ಲಿ ಇಲ್ಲದ ಕಾರಣ ನಿಗದಿತ ನ್ಯಾಯಾಲಯದ ಶುಲ್ಕವನ್ನು ಪಾವತಿಸಿಲ್ಲ ಎಂದರೆ, (ಸದರಿ ಪ್ರಶ್ನೆ ಕಾನೂನಾತ್ಮವಾದ ಕಾರಣ ಸದರಿ ಪ್ರಶ್ನೆಗೆ ಸಾಕ್ಷಿಗೆ ಉತ್ತರಿಸಲು ವಿನಾಯತಿಯನ್ನು ನೀಡಲಾಯಿತು).

ದಾವಾಸ್ತಿಗಳಲ್ಲಿ ಪಾಲುವಿಭಾಗ ಕೋರಿ 3 ನೇ ಪ್ರತಿವಾದಿಗೆ ಸುಮಾರು 5-6 ವರ್ಷಗಳಿಂದ ಬೇಡಿಕೆ ಇಟ್ಟಿರುತ್ತೇನೆ. ಹಾಗಾಗಿ ದಾವಾಸ್ತಿಗಳನ್ನು ನಾನು ಇದುವರೆಗೂ ವೈಯಕ್ತಿಕವಾಗಿ ನೋಡದ ಕಾರಣ ಸದರಿ ಆಸ್ತಿಗಳಲ್ಲಿ ಯಾರು ಅನುಭವದಲ್ಲಿದ್ದಾರೆ ಎಂಬ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿ. ಸದರಿ 5 ಮತ್ತು 9 ನೇ ದಾವಾಸ್ತಿಯನ್ನು ಹೊರತುಪಡಿಸಿ ಉಳಿದ ದಾವಾಸ್ತಿಗಳಲ್ಲಿ 1/3 ನೇ ಭಾಗದಲ್ಲಿ ಚೆನ್ನವೀರಪ್ಪನವರ 2 ನೇ ಮಗನಾದ ಚೆನ್ನಪ್ಪ ಮತ್ತು ಸಾವಿತ್ರಮ್ಮ ದಂಪತಿಗಳಿಗೆ ಕಾಂತರಾಜು, ಚಂದ್ರಮ್ಮ, ಚಂದ್ರಶೇಖರ ಮತ್ತು ಧನಂಜಯ ಎನ್ನುವವರು ಈಗಲೂ ಸಹ ಸಾಗು ಮಾಡುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

ನಾವು ಮುಗಿಲೇಹಳ್ಳಿ ಗ್ರಾಮಕ್ಕೆ ವರ್ಷಕ್ಕೊಮ್ಮೆ ಹೋಗುತ್ತೇವೆ. ನಾವು ಸದರಿ ಗ್ರಾಮಕ್ಕೆ ವರ್ಷಕ್ಕೊಮ್ಮೆ ಹೋಗುವ ಕಾರಣ 3 ನೇ ಪ್ರತಿವಾದಿಯ ಮನೆಯಲ್ಲಿ ಇರುವುದನ್ನು ಹೊರತುಪಡಿಸಿ ನಮ್ಮ ಕುಟುಂಬ ಮತ್ತು ವಂಶಸ್ಥರ ಬಗ್ಗೆಯಾಗಲಿ ಅಥವಾ ನಮ್ಮ ಕುಟುಂಬದ ಆಸ್ತಿಗಳ ಬಗ್ಗೆಯಾಗಲಿ ಮತು ಅವುಗಳಲ್ಲಿ ಯಾರು ಅನುಭವದಲ್ಲಿದ್ದಾರೆ ಎಬ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿ.

**(ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ಸಮಯವಕಾಶ ನೀಡಲಾಯಿತು).**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

02ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ.ಚನ್ನಗಿರಿ.